

## ಅಲ್ಲೊಂದು ಹಕ್ಕಿ, ಇಲ್ಲೊಂದು ಮುಗುಳು



ಪ್ರಮೋದ ಅವರ 'ಅಲ್ಲೊಂದು ಹಕ್ಕಿ, ಇಲ್ಲೊಂದು ಮುಗುಳು' (ಅ/ 26) ಲೇಖನ ಅತ್ಯುತ್ತಮವಾಗಿದೆ. ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಸುಮಾರು 127 ಭಾರತೀಯ ಪಟುಗಳು ಭಾಗವಹಿಸಿದ್ದು, ಅದು ಹಿಂದೆಂದಿಗಿಂತ ಹೆಚ್ಚಿನ ಸಂಖ್ಯೆಯದ್ದಾಗಿದೆ. ನಮ್ಮ ಕ್ರೀಡಾಪಟುಗಳು ಒಂದು ಚಿನ್ನ, ಎರಡು ಬೆಳ್ಳಿ ಹಾಗೂ ನಾಲ್ಕು ಕಂಚು ಸೇರಿ ಒಟ್ಟು ಏಳು ಪದಕಗಳನ್ನು ಗೆದ್ದು ಭಾರತದ ಕೀರ್ತಿಯನ್ನು ಬೆಳಗಿಸಿದ್ದಾರೆ. ಅದರಲ್ಲೂ ಜಾವೆಲಿನ್ ಎಸೆತದಲ್ಲಿ ಚಿನ್ನದ ಪದಕ ಪಡೆದ ನೀರಜ್ ಚೋಪ್ರಾ ಸಾಧನೆ ಅಮೋಘ.

—ಎಚ್.ಆರ್. ವಸ್ತ್ರದ, ಧಾರವಾಡ

ನಮ್ಮ ಕ್ರೀಡಾಪಟುಗಳ ಗರಿಮೆ ಹಾಗೂ ಹಿರಿಮೆ ದುಪ್ಪಟ್ಟು ಹೆಚ್ಚಿ ಅವರ ಬಗ್ಗೆ ಹೆಮ್ಮೆ ಅನಿಸುತ್ತದೆ. ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ನಮ್ಮ ಕ್ರೀಡಾಪಟುಗಳು ಇಂದು ಲಕ್ಷಾಂತರ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಮಳೆ ಬರುವ ಕಾಲಕ್ಕ...

ಮಳೆಯ ಸುತ್ತ ಹರಿದ ಸುಂದರ ವಿಚಾರಲಹರಿ, ಮಳೆಯ ಸೌಂದರ್ಯ, ಸಂಭ್ರಮ, ಅಬ್ಬರ, ಅವಾಂತರಗಳು ರಹಮತ್ ತರೀಕೆರೆ ಅವರ 'ಮಳೆ ಬರುವ ಕಾಲಕ್ಕ' (ಆ. 26) ಪ್ರಬಂಧದಲ್ಲಿ ಅನಾವರಣಗೊಂಡಿವೆ. ಮಲೆನಾಡು, ಕೊಡಗಿನ ಚಿತ್ರಗಳು, ಕಾವ್ಯ, ಜಾನಪದ ಮತ್ತು ಜನರ ನಂಬಿಕೆಯ ಉದಾಹರಣೆಗಳು, ಸ್ವಾನುಭವಗಳು ಸೇರಿ ಪ್ರಬಂಧ ರಸವತ್ತಾಗಿದೆ. ಮಳೆ ಇಲ್ಲದೆ ಬದುಕಿಲ್ಲ, ಆದರೆ ಮಳೆ ಜನರಿಂದ ಬೈಗುಳಗಳನ್ನು ತಿಂದಷ್ಟು ಬೇರೆ ಯಾರೂ ತಿಂದಿರಲಿಕ್ಕಿಲ್ಲ. ಪ್ರಬಂಧದಲ್ಲಿ ಅರಳಿದ ಲೇಖಕರ ಬಾಲ್ಯದ ಸವಿ ನೆನಪುಗಳು ನಮ್ಮದೂ ಆಗಿದ್ದು ಮನದಂಗಳದಲ್ಲಿ ಸದಾ ಕುಣಿದಾಡುತ್ತಿವೆ.

—ರಮೇಶ್ ರಾವ್, ಕೈಕಂಬ

ಲಲಿತ ಲೇಖನ ಇಳೆಯ ಹಾಗೂ ಮಾನವನ ಜೀವನದುದ್ದಕ್ಕೂ ಹಾಸುಹೊಕ್ಕಾಗಿರುವ ಮಳೆಯ ವಿವಿಧ ಆಯಾಮಗಳನ್ನು ಸೊಗಸಾಗಿ ಬಣ್ಣಿಸಿದೆ. ಮಳೆಯೆಂದರೆ ಮನವರಳುತ್ತದೆ. ಪ್ರತಿಯೊಬ್ಬರ ಅವಶ್ಯಕತೆ, ಅಡಚಣೆಗನುಗುಣವಾಗಿ ಏಕಕಾಲಕ್ಕೆ ಬಗೆಬಗೆಯ ನವರಸಗಳನ್ನು ಹೊರತರುವ ಸಾಮರ್ಥ್ಯ ಬಹುಶಃ ಮಳೆಗೆ ಮಾತ್ರ ಇದೆಯೇನೊ. ನೆನಪಿನ ಮಳೆಯಿಂದ ನಾವೂ ಒದ್ದೆಯಾದೆವು!

—ಹಯಮನಗೋಳಿ

ಮಹಾನಗರದಲ್ಲಿ ಸದಾ ತವಕದ ಬದುಕು. ಧಾವಂತದ ಸುಳಿಯಲ್ಲಿ ತೊಳಲಿ ಬಳಲಿ ಅದರಲ್ಲೇ ಮುದುಡಿದ ನವನಾಗರಿಕತೆಯ ಆವೇಗದಲ್ಲಿ, ವರ್ಷ ಧಾರೆಯಾದೊಡನೆ ನೀರ ಕಾಲುವೆಗಳು ಉಕ್ಕಿ ಹರಿಯುತ್ತವೆ. ಜಲಸ್ತಂಭನದ ರಸ್ತೆಗಳ, ಮುಳುಗಿದ ಮನೆಗಳ, ಅವಘಡಗಳ ಚಿತ್ರಣಗಳೇ ಮೈವೆತ್ತಿರುವ ವರ್ತಮಾನದಲ್ಲಿ ವರ್ಷಧಾರೆಯನ್ನು ಆಲಿಂಗಿಸುವ, ಅನುಭವಿಸುವ ಶೂನ್ಯ ಮನಸ್ಥಿತಿಯಿದೆ. ಇಂಥ ಸಮಯದಲ್ಲಿ ರಹಮತ್ ತರೀಕೆರೆ ಅವರ ಅತಿ ಸುಂದರ ಮಳೆಕಥನ ವರ್ಷಾನುಭವಗಳ ಹಸಿಹಸಿ ನೆನಪುಗಳಿಂದ ಪುಳಕಿತಗೊಳಿಸಿತು. ಮಳೆಗಾಲದ ಎಲ್ಲ ಸೂಕ್ಷ್ಮಗಳ ಸಹಜ ನಿರೂಪಣೆ ಹಾಗೂ ವಿವಿಧ ಮಳೆಗಳ ಬಗೆಗಿನ ಆಡುಮಾತುಗಳು ಮುದಗೊಳಿಸಿದವು.

—ಎಂ. ಶಂಕರ್, ಬೆಂಗಳೂರು.

ಪ್ರಬಂಧ ಓದಿ ಮಳೆಯಲ್ಲಿ ನೆಂದು ಖುಷಿಗೊಂಡ ಅನುಭವ. ಮಳೆ ಎಂದರೆ ಒಬ್ಬೊಬ್ಬರಿಗೂ ಒಂದೊಂದು ರೀತಿಯ ಅನುಭೂತಿ.

—ಸಾವಿತ್ರಿ ಶ್ಯಾನುಭಾಗ್, ಕುಂದಾಪುರ

ಪ್ರಬಂಧ ನಮ್ಮನ್ನು ಮಲೆನಾಡಿಗೆ ಕೊಂಡೊಯ್ದು ಮಳೆಯಲ್ಲಿ ತೊಯ್ದು ತೊಪ್ಪೆಯಾಗಿಸಿತು. ಪ್ರಸ್ತುತ ಕಾಲದ ಬಹುತೇಕ ಜನರಿಗೆ ಅರಿವಿರದ ಬಹಳ ವಿಚಾರಗಳನ್ನು ಈ ಬರಹ ಒಳಗೊಂಡಿದೆ. ನೆನಪುಗಳು ಮನದಲ್ಲಿ ನುಗ್ಗಿ ಬಂದವು.

—ಕೆ. ಪ್ರಕಾಶ್, ಬೆಂಗಳೂರು

## ವಿಜ್ಞಾನೋತ್ಸವ

ಗುರುರಾಜ್ ದಾವಣಗೆರೆ ಅವರ 'ವಿಜ್ಞಾನೋತ್ಸವ' (ಆ. 19) ಲೇಖನ ತುಂಬಾ ಸೊಗಸಾಗಿದೆ, ವಿದ್ವತ್ಪೂರ್ಣವಾಗಿ ಮೂಡಿಬಂದಿದೆ.

—ಡಾ. ಉದಯಕುಮಾರ ನಾಯ್ಕ, ಬೆಳಗಾವಿ

## ಕಿಶೋರ್ ಸಿನಿಮಾ

'ಕಿಶೋರ್ ಸಿನಿಮಾ ಕನಸಿಗೆ ಹೊಸ ಅರ್ಥ' (ಆ. 26, ಲೇ: ವಿಶಾಖ ಎನ್.) ಲೇಖನ ಮುದ ನೀಡಿತು. ಅಂದಿನ ಸುಪ್ರಸಿದ್ಧ ನಟಿ ಮಧುಬಾಲಾರನ್ನು ಒಳಗೊಂಡಂತೆ ನಾಲ್ವರನ್ನು ಮದುವೆಯಾಗಿದ್ದ ಕಿಶೋರ್ ಜೀವನ ವರ್ಣರಂಜಿತವಾದುದು. 'ಓ ಮೇರಿ ಶರ್ಮಿಲಿ' ಎಂಬ ಬಬ್ಲಿ ಹಾಡಿನ ಜೊತೆಗೆ, 'ತೇರೆ ಬಿನಾ ಜಿಂದಗಿ ಸೆ ಕೋಯಿ' ಎಂಬ ಭಾವ ತುಂಬಿದ ಸಾವಿರಾರು ಹಾಡುಗಳು ಇಂದಿಗೂ ಹಸಿರಾಗಿವೆ. ಕಿಶೋರ್ ಜೀವನಗಾಥೆಯನ್ನು ತೆರೆಯ ಮೇಲೆ ನೋಡಲು ಕಾತುರದಿಂದ ಇದ್ದೇವೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ಮೊಟ್ಟೆಯಿಂದ ಮಾನವ

ಚೈತ್ರಿಕಾ ನಾಯ್ಕ, ಹರ್ಗಿ ಅವರ 'ಮೊಟ್ಟೆಯಿಂದ ಮಾನವ' (ಆ. 26) ಲೇಖನ ವೈದ್ಯಕೀಯ ಕ್ಷೇತ್ರದ ಅಗಾಧ ಬೆಳವಣಿಗೆಯ ಬಗ್ಗೆ ಬೆಳಕು ಚೆಲ್ಲಿದೆ. ಮಕ್ಕಳಿಲ್ಲದ ದಂಪತಿಗಳು ಹಾಗೂ ಇತರ ಕಾರಣಗಳಿಂದ ಮಕ್ಕಳಾಗುವುದನ್ನು ಮುಂದೂಡುವ ಯುವದಂಪತಿಗಳಿಗೆ ಈ ತಂತ್ರಜ್ಞಾನ ಬಹಳ ಉಪಯುಕ್ತ ಆಗಬಹುದು.

—ಮಧುರ ಮತ್ತು ಸುಬ್ರಹ್ಮಣ್ಯ, ಬೆಂಗಳೂರು

'ಮೊಟ್ಟೆಯಿಂದ ಮಾನವ!' ಮುಖಪುಟ ನೋಡಿದ ತಕ್ಷಣ ಕುತೂಹಲ ಮೂಡಿತು! ಚೈತ್ರಿಕಾರ ಲೇಖನ, ಮಗುವಿನ ಜನನದ ಪರಿಕಲ್ಪನೆ ಬದಲಿಸುತ್ತಿರುವ 'ಎಗ್ ಫ್ರೀಜಿಂಗ್' ತಂತ್ರಜ್ಞಾನದ ಬಗ್ಗೆ ಬೆಳಕು ಚೆಲ್ಲಿದೆ. ಇದರ ಬಳಕೆಯಿಂದ ಹೆಣ್ಣುಮಕ್ಕಳ ಅಂಡಾಣು ಪಡೆದು ವಿದೇಶಕ್ಕೆ ಸಾಗಣೆ ಮಾಡಿ ಹಣ ದೋಚುತ್ತಿರುವುದು ಎಂತಹ ವಿಪರ್ಯಾಸ.

—ಬೆಂ.ಮು. ಮಾರುತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in